ವಿಶ್ವವಾಣಿ

ಸಂಪಾದಕೀಯ

ಹಣವಿಲ್ಲದೆ ಚುನಾವಣೆ ಸಾಧ್ಯವಿಲ್ಲವೇ?

ದೇಶದಲ್ಲಿ ಲೋಕಸಭೆ ಚುನಾವಣೆಯ ಎರಡನೇ ಹಂತದ, ರಾಜ್ಯದಲ್ಲಿ ಮೊದಲ ಹಂತದ ಮತದಾನ ಶುಕ್ರವಾರ ಮುಕ್ತಾಯವಾಗಿದೆ. ಅಲ್ಲಲ್ಲಿ ಚಿಕ್ಕಪುಟ್ಟ ಅಹಿತಕರ ಘಟನೆಗಳನ್ನು ಹೊರತುಪಡಿಸಿದರೆ ಬಹುತೇಕ ಶಾಂತಿಯುತವಾಗಿಯೇ ನಡೆದಿದೆ. ನಿಜಕ್ಕೂ ಇದು ಪ್ರಜಾಪ್ರಭುತ್ವದ ಮತ್ತು ಚುನಾವಣೆ ಆಯೋಗದ ಗೆಲುವೇ ಸರಿ. ಈ ಸಲದ ಲೋಕಸಭೆ ಚುನಾವಣೆ ಘೋಷಣೆಯಾದಾಗಿನಿಂದ ಚುನಾವಣಾ ಆಯೋಗದ ಅಧಿಕಾರಿಗಳು ದೇಶದ ಇತಿಹಾಸದಲ್ಲೇ ಕಂಡು ಕೇಳರಿಯದಷ್ಟು ಹಣವನ್ನು ಜಪ್ತಿ ಮಾಡಿದ್ದಾರೆ. ಇದುವರೆಗೆ ದಾಖಲೆ ಇಲ್ಲದ 4,650 ಕೋಟಿ ರು. ಜಪ್ತಿ ಮಾಡಿರುವ ಕುರಿತು ಆಯೋಗ ಮಾಹಿತಿ ನೀಡಿದೆ. ಇದು ದೇಶದ ಲೋಕಸಭೆ ಚುನಾವಣೆಗಳ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೊತ್ತದ ಹಣದ ದಾಖಲೆ. ಅದರಲ್ಲೂ, ಮಾರ್ಚ್ 1ರಿಂದ ಇದುವರೆಗೆ ಅಧಿಕಾರಿಗಳು ನಿತ್ಯ ಸರಾಸರಿ 100 ಕೋಟಿ ರು. ಜಪ್ತಿ ಮಾಡಿದಂತಾಗಿದೆ. ಇದನ್ನು ಚುನಾವಣೆ ಆಯೋಗದ ಯಶಸ್ಸು ಎನ್ನಬೇಕೋ ಅಥವಾ ಪ್ರಜಾಪ್ರಭುತ್ವದ ವೈಫಲ್ಯವೆನ್ನಬೇಕೋ ತಿಳಿಯದಂತಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಇದುವರೆಗೆ ಚುನಾವಣೆಗಳಲ್ಲಿ ಹಣದ ಹೊಳೆ ಹರಿಯುವುದು, ಆಯೋಗದ ಅಧಿಕಾರಿಗಳು ಕೋಟ್ಯಂತರ ರು. ವಶಪಡಿಸಿಕೊಳ್ಳುವುದು ಸಾಮಾನ್ಯವಾಗಿದೆ. ಚುನಾವಣಾ ಸುಧಾರಣೆ, ಮತದಾರರ ಸಾಕ್ಷರತೆ ಹೆಚ್ಚಿದಂತೆ ಈ ಪ್ರಮಾಣ ಕಡಿಮೆಯಾಗಬಹುದು ಎಂಬ ನಿರೀಕ್ಷೆ ಇತ್ತು. ಅದು ಹುಸಿಯಾಗಿದೆ. ಹೆಚ್ಚಿನ ಕಡೆ ಹಾಕಲಾದ ಚೆಕ್‌ಪೋಸ್ಟ್‌ಗಳು, ಮಾಹಿತಿದಾರರು ಹಾಗೂ ಅಧಿಕಾರಿಗಳ ಹದ್ದಿನ ಕಣ್ಣಿನಿಂದಾಗಿ ಹಲವು ಪ್ರಕರಣಗಳು ಸಿಕ್ಕಿಬಿದ್ದಿವೆ. ಆದರೂ ಸಿಗದೇ ತಪ್ಪಿಸಿಕೊಳ್ಳುತ್ತಿರುವುದು ಇದರ ಹತ್ತು ಪಟ್ಟು, ನೂರು ಪಟ್ಟು ಇರಬಹುದು. ಚುನಾವಣೆಗೆ ನಿಲ್ಲುವ ಒಬ್ಬ ಅಭ್ಯರ್ಥಿ ಪ್ರಚಾರಕ್ಕೆ ಎಷ್ಟು ಹಣ ವೆಚ್ಚ ಮಾಡಬಹುದು? ಇದಕ್ಕೆ ಮಿತಿಯನ್ನೂ ಚುನಾವಣಾ ಆಯೋಗವೇ ವಿಧಿಸಿದೆ. ಆದರೆ ಎಂದಾದರೂ ಈ ಮಿತಿ ಪಾಲನೆಯಾದದ್ದು, ತಪ್ಪಿತಸ್ಥರಿಗೆ ಶಿಕ್ಷೆಯಾದದ್ದು ಇದೆಯೇ? ಇಲ್ಲವೇ ಇಲ್ಲ ಎನ್ನಬಹುದು. ಇದು ಹೀಗೇ ಮುಂದುವರಿದರೆ ಚುನಾವಣೆ ವ್ಯವಸ್ಥೆಯೇ ನೆಲಕಚ್ಚಲಿದೆ. ಚುನಾವಣೆ ಎಂದರೇ ಹಣ ಹಂಚಿಕೆ, ಅಕ್ರಮ ಎಂಬ ಚಿತ್ರಣ ಕಾಯಂ ಆಗಲಿದೆ. ಚುನಾವಣೆ ಅಕ್ರಮಗಳನ್ನು ತಡೆಯದಿದ್ದರೆ ಪ್ರಜಾಪ್ರಭುತ್ವ ಸಶಕ್ತವಾಗಿ ಉಳಿಯಲು ಸಾಧ್ಯವಿಲ್ಲ. ಮತದಾರರು ಕೂಡ ಈ ವಿಷಯದಲ್ಲಿ ಜಾಗೃತರಾಗಬೇಕು.

ಸೊಂಪಾದಕೀಯ

ಶೃತಿ ತಪ್ಪಿದ ತಾಳ

ಸಾಮಾನ್ಯವಾಗಿ ಸೆಲೆಬ್ರಿಟಿಗಳು ತಾವು ಏನು ಮಾತಾಡಿದರೂ ನಡೆಯುತ್ತದೆ ಅನ್ನೋ ಗುಂಗಿನಲ್ಲಿ ಇರ್ತಾರೆ. ಸಾರ್ವಜನಿಕ ಜೀವನದಲ್ಲಿ ಫೇಮಸ್ ಆದಮೇಲೆ ನಾವು ಏನು ಮಾತಾಡಿದರೂ ಅದು ಯಾರ ನೋಟಿಸಿಗೂ ಬರಲ್ಲ ಅನ್ನೋ ಹುಂಬ ಧೈರ್ಯ ಕೆಲವರದ್ದು. ಆದರೆ ಹಂಗೆ ಏನೇನೋ ಮಾತಾಡಿ ಈಗ ಮಹಿಳಾ ಆಯೋಗದಿಂದ ನೋಟೀಸು ಬರುವಂತೆ ಮಾಡಿಕೊಂಡಿರೋದು ಕನ್ನಡ ಚಿತ್ರರಂಗದ ನಟಿ ಶೃತಿ. ಶೃತಿ ಅವರನ್ನು ಬರೀ ನಟಿ ಅಂದ್ರೆ ತಪ್ಪಾಗುತ್ತೆ. ಯಾಕಂದ್ರೆ, ಈಗ ಆಕೆ ರಾಜಕಾರಣಿ ಕೂಡಾ. ಮೊದಲೇ ಹೇಳಿ ಕೇಳಿ ಎಲೆಕ್ಷನ್ ಟೈಮು. ಈ ಸಮಯದಲ್ಲಿ ರಾಜಕಾರಣಿಗಳ ಮಾತಿಗೆ ಲಿಮಿಟ್ ಅನ್ನೋದೇ ಇರಲ್ಲ. ಜೊತೆಗೆ ಜೋಶ್ ಕೂಡಾ ಜಾಸ್ತಿ ಇರುತ್ತೆ. ಹಾಗಾಗಿ ಅಂಥದ್ದೇ ಜೋಶ್ ನಲ್ಲಿ ಶೃತಿ ರಾಜ್ಯ ಸರಕಾರವನ್ನು ಟೀಕೆ ಮಾಡಲು ಹೋಗಿ ಹೆಣ್ಣುಮಕ್ಕಳ ಕೆಂಗಣ್ಣಿಗೆ ಗುರಿ ಆಗಿದ್ದಾರೆ. ರಾಜ್ಯ ಸರ್ಕಾರದ ಶಕ್ತಿ ಯೋಜನೆಯ ಬಗ್ಗೆ ಮಾತಾಡ್ತಾ, ಹೆಣ್ಣುಮಕ್ಕಳು ಶಕ್ತಿ ಯೋಜನೆಯಿಂದಾಗಿ ದಾರಿ ತಪ್ಪುತ್ತಾ ಇದ್ದಾರೆ ಅನ್ನೋ ಕುಮಾರಸ್ವಾಮಿ ಅವರ ಮಾತಿನ ಧಾಟಿಯಲ್ಲೇ ಶೃತಿ ಕೂಡಾ ಹೆಜ್ಜೆ ಹಾಕಿದ್ದಾರೆ. ಆದರೆ ಈಗ ಶೃತಿ ಹಾಕಿದ ಹೆಜ್ಜೆ ಅವರಿಗೆ ಮುಳುವಾಗಿದೆ. ಎಷ್ಟೋ ಜನ ಗಂಡಂದಿರು ನನ್ ಹೆಂಡ್ತಿ ಎಲ್ಲೋದ್ಳಪ್ಪಾ ಅಂತಾ ಕಣ್ಣೀರು ಹಾಕ್ತಾ ಇದ್ದಾರೆ ಅಂತ ನಾಲಿಗೆ ಹರಿಬಿಟ್ಟಿದ್ದಾರೆ ಶೃತಿ. ಹಾಗೆ ನೋಡಿದರೆ ಸಿನಿಮಾಗಳ ಮೂಲಕ ಕೇವಲ ಹೆಣ್ಣುಮಕ್ಕಳ ಕಣ್ಣೀರಿನ ಬಗ್ಗೆ ಮಾತಾಡುತ್ತಿದ್ದ ಶೃತಿ ಅವರು ಈಗ ಫಾರ್ ಎ ಚೇಂಜ್ ಗಂಡು ಮಕ್ಕಳ ಕಣ್ಣೀರಿನ ಬಗ್ಗೆ ಮಾತಾಡಿದ್ದಾರೆ. ಆದರೆ ಪಾಪ ಇದರಿಂದಾಗಿ ಅವರ ಹಣೆಬರಹವೇ ಚೇಂಜ್ ಆದಂಗಿದೆ. ಶೃತಿ ಅವರ ಮಾತು ಕೇಳಿ, ರಾಜ್ಯದ ಹೆಣ್ಣುಮಕ್ಕಳೆಲ್ಲಾ ದಾರಿ ತಪ್ಪಿದ್ದಾರಾ, ನೀವೊಬ್ಬರೇ ಸರಿ ಇರೋದಾ ಅನ್ನೋ ಧಾಟಿಯಲ್ಲಿ ಜನ ಆಕ್ರೋಶ ಹೊರಹಾಕುತ್ತಿದ್ದಾರೆ. ಅದರಲ್ಲೂ ವೈವಾಹಿಕ ಜೀವನದಲ್ಲಿ ಗಂಡಂದಿರನ್ನು ಬದಲಾಯಿಸಿ ತಾವೇ ಅವರನ್ನು ಕಣ್ಣೀರಿನಲ್ಲಿ ಕೈ ತೊಳೆಯುವ ಹಾಗೆ ಮಾಡಿರುವ ಶೃತಿ ಅವರಿಗೆ ಬೇರೆ ಹೆಂಗಸರ ಗಂಡಂದಿರ ಕಣ್ಣೀರಿನ ಬಗ್ಗೆ ಮಾತಾಡೋ ಉಸಾಬರಿ ಯಾಕೆ ಅನ್ನೋದು ಎಲ್ಲರ ಪ್ರಶ್ನೆ. ಅದರಲ್ಲೂ ಸಿನಿಮಾರಂಗದಲ್ಲಿ ಇದ್ದುಕೊಂಡು ಹೆಣ್ಣುಮಕ್ಕಳ ಬಗ್ಗೆ ಅವರು ಹಗುರವಾಗಿ ಮಾತಾಡಿರೋದು ಮಾತ್ರ ವಿವಾದಕ್ಕೆ ಕಾರಣವಾಗಿದೆ.

ಸಂಪಾದಕರ ಸದ್ಯಶೋಧನೆ

ಸೋಲಿನ ನಂತರ ಇಂದಿರಾ ಸಂಕಟ

'ನಾನು ರಾಯಬರೇಲಿಯಲ್ಲಿ ನಾಮಪತ್ರ ಸಲ್ಲಿಸಿ ಹೊರಬಂದು ಅಲ್ಲಿ ಸೇರಿದ್ದ ಜನರೊಂದಿಗೆ ಮಾತಾಡಲಾರಂಭಿಸಿದೆ. ಏನೋ ವ್ಯತ್ಯಾಸ ಹೊಡೆಯುತ್ತಿದೆ ಮತ್ತು ಪರಿಸ್ಥಿತಿ ಮೊದಲಿದ್ದ ಹಾಗೆ ಇಲ್ಲ ಎನಿಸಿತು' ಎಂದು ಇಂದಿರಾಗಾಂಧಿ ಹೇಳಿದರು. ಅವರು ಮೋಹನ್ ಮಕೀನ್ಸ್ ಲಿಕ್ಕರ್ ಕಂಪನಿಯ ಕಪಿಲ್ ಮೋಹನ್ ಮತ್ತು ಅನಿಲ್ ಬಾಲಿ ಜತೆ ತಮ್ಮ ಚುನಾವಣಾ ಸೋಲಿನ ಬಳಿಕ ತಮ್ಮ ಸಫದರಜಂಗ್ ರಸ್ತೆ ನಿವಾಸದಲ್ಲಿ ಮಾತಾಡುತ್ತಿದ್ದರು. 'ಸಾಮಾನ್ಯವಾಗಿ ನಾನು ನನ್ನ ಕ್ಷೇತ್ರಕ್ಕೆ ಹೋದರೆ ಜನ ಮುತ್ತಿಕೊಳ್ಳುತ್ತಿದ್ದರು. ಆದರೆ ಅಂದು ನಾನು ಅಲ್ಲಿಗೆ ನಾಮಪತ್ರ ಸಲ್ಲಿಸಲು ಹೋದರೆ, ಹೆಚ್ಚಿನ ಸಂಖ್ಯೆಯಲ್ಲಿ ಜನರಿರಲಿಲ್ಲ, ನನ್ನ ಜತೆ ಮಾತಾಡಲು ಅವರಲ್ಲಿ ಹೆಚ್ಚು ಉತ್ಸಾಹವೂ ಇರಲಿಲ್ಲ. ಚುನಾವಣಾ ಪ್ರಚಾರದ ಸಮಯದಲ್ಲೂ ಜನರಿಂದ ಉತ್ಸಾಹದಾಯಕ ಸ್ಪಂದನೆ ಇರಲಿಲ್ಲ. ಒಂದು ಸಂದರ್ಭದಲ್ಲಿ, ಹಿಂದಿ ಚಿತ್ರನಟ ದಿಲೀಪ್ ಕುಮಾರ ಪಶ್ಚಿಮ ಉತ್ತರ ಪ್ರದೇಶದ ಜಿಲ್ಲೆಗಳಲ್ಲಿ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸಿದ್ದಾಗ ಜನ ಎದ್ದು ಹೋಗುತ್ತಿದ್ದರು. ಅವರ ಮಾತುಗಳನ್ನು ಕೇಳಲು ಜನರಿಗೆ ಆಸಕ್ತಿಯೇ ಇರಲಿಲ್ಲ. ಆದಾದ ಬಳಿಕ ಇಂದಿರಾ ಮಾತಾಡುತ್ತಾರೆಂಬುದು ಗೊತ್ತಿದ್ದರೂ, ಜನ ಅವರ ಮಾತುಗಳನ್ನು ಕೇಳುವ ಮುನ್ನವೇ ಜಾಗ ಖಾಲಿ ಮಾಡುತ್ತಿದ್ದರು. ಈ ಸಂಗತಿ ಇಂದಿರಾಗೆ ನುಂಗಲಾರದ ತುತ್ತಾಗಿತ್ತು. ಆ ದಿನ ಬೆಳಗ್ಗೆ ಹನ್ನೊಂದು ಗಂಟೆ ಹೊತ್ತಿಗೆ ಕಪಿಲ್ ಮೋಹನ್ ಮತ್ತು ಅನಿಲ್ ಬಾಲಿ, ಇಂದಿರಾ ಅವರ ಸಫದರಜಂಗ್ ರಸ್ತೆ ನಿವಾಸಕ್ಕೆ ತೆರಳಿದರೆ, ಅವರನ್ನು ತಮ್ಮ ನಿವಾಸದ ಪಕ್ಕದಲ್ಲಿರುವ ಉದ್ಯಾನಕ್ಕೆ ಕರೆದುಕೊಂಡು ಹೋದರು. ಸಾಮಾನ್ಯವಾಗಿ ಇಂದಿರಾ, ಅವರಿಬ್ಬರನ್ನೂ ವಿದೇಶಿ ಗಣ್ಯರು, ಪ್ರಮುಖ ವ್ಯಕ್ತಿಗಳನ್ನು ಭೇಟಿ ಮಾಡುವ ಸುಂದರವಾಗಿ ಅಲಂಕರಿಸಿದ, ವಿಶಾಲವಾದ ಕೋಣೆಯಲ್ಲಿ ಭೇಟಿ ಮಾಡುತ್ತಿದ್ದರು. ಆದರೆ ಚುನಾವಣೆಯಲ್ಲಿ ಸೋತ ನಂತರ ಇಂದಿರಾ ಆ ಕೋಣೆಯೊಳಗೆ ಹೋಗುವುದನ್ನು ನಿಲ್ಲಿಸಿದ್ದರು. ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಪಕ್ಷದ ಸರಕಾರ ತಮ್ಮ ಮನೆಯಲ್ಲಿ ಕಳ್ಳಗಿವಿ ಇರಿಸಿರಬಹುದು ಎಂಬ ಅನುಮಾನ ಅವರನ್ನು ಬಲವಾಗಿ ಕಾಡುತ್ತಿತ್ತು. ಅಮೆರಿಕದ ರಹಸ್ಯ ಬೇಹುಗಾರ ಪಡೆ ತಮ್ಮ ನಿವಾಸದ ಮೇಲೆ ಕಣ್ಗಾವಲನ್ನಿಟ್ಟಿರಬಹುದು ಎಂಬ ಶಂಕೆಯೂ ಅವರಿಗಿತ್ತು. ಈಜಿಪ್ಟಿನ ಅಧ್ಯಕ್ಷ ಅನ್ವರ್ ಸಾದತ್ ಅವರ ನಿವಾಸದ ಮೇಲೂ ಅಮೆರಿಕ ಕಣ್ಗಾವಲು ಇಟ್ಟಿದ್ದು ಇಂದಿರಾ ಗಮನಕ್ಕೆ ಬಂದಿತ್ತು. ಇಂಥ ಸಂದರ್ಭದಲ್ಲಿ ಯಾರನ್ನೂ ನಂಬಲು ಇಂದಿರಾ ಸಿದ್ಧರಿರಲಿಲ್ಲ, ನಂಬಿದವರೇ ತಮಗೆ ಕೈ ಕೊಡುತ್ತಾರೆ ಎಂಬುದು ಅವರಿಗೆ ದೃಢವಾಗಿದ್ದರಿಂದ ಅವರು ಇನ್ನಷ್ಟು ಎಚ್ಚರ ವಹಿಸಲಾರಂಭಿಸಿದ್ದರು. ಮೋಹನ್ ಮಕೀನ್ಸ್ ಕುಟುಂಬ ಹಲವು ವರ್ಷಗಳಿಂದ ಇಂದಿರಾಗೆ ನಿಕಟವಾಗಿತ್ತು. ಇಂದಿರಾ ಮಗ ಸಂಜಯಗೂ ಮೋಹನ್ ಆತ್ಮೀಯರಾಗಿದ್ದರು. ಅತಿಥಿಗಳಿಗೆ ಚಹ ಮತ್ತು ಚಿಕನ್ ಸ್ಯಾಂಡ್ ವಿಚ್ ತರುವಂತೆ ಹೇಳಿದರು. 'ಈ ಕಾರ್ಪೆಟ್‌ಗಳನ್ನು ಏನು ಮಾಡಬೇಕೆಂಬುದೇ ತಿಳಿಯುತ್ತಿಲ್ಲ' ಎಂದು ಇಂದಿರಾ ಖಿನ್ನಮನಸ್ಕರಾಗಿ ನುಡಿದರು. ಅವರ ನಿವಾಸದ ಎಲ್ಲ ಕೋಣೆಗಳೂ ದುಬಾರಿ ಬೆಲೆಯ ಕಾಶ್ಮೀರಿ ಕಾರ್ಪೆಟ್ ಗಳಿಂದ ಅಲಂಕೃತವಾಗಿದ್ದವು. ಅದರಲ್ಲೂ ಡೈನಿಂಗ್ ರೂಮಿನಲ್ಲಿರುವ ಕಾರ್ಪೆಟ್ ಎಲ್ಲಕ್ಕಿಂತ ಗಾತ್ರದಲ್ಲಿ ದೊಡ್ಡದಾಗಿತ್ತು. 'ಇವುಗಳನ್ನೆಲ್ಲ ಎಲ್ಲಿ ಇಡುವುದು ಎಂಬುದೇ ಗೊತ್ತಾಗ್ತಾ ಇಲ್ಲ. ಇವೆಲ್ಲವೂ ನನ್ನ ತಂದೆಯವರಿಗೆ ಸೇರಿದ್ದು. ಈ ಸರಕಾರ ನನಗೆ ಸರಕಾರಿ ನಿವಾಸವನ್ನು ನೀಡಲಿಕ್ಕಿಲ್ಲ' ಎಂದು ಅವರು ಮ್ಲಾನವದನರಾಗಿ ನುಡಿದರು. 1977 ರ ಏಪ್ರಿಲ್ 11 ರಂದು ಆ ನಿವಾಸವನ್ನು ತೆರವು ಮಾಡುವಂತೆ ಸರಕಾರ ಸೂಚಿಸಿತು. ಆದರೆ ಅವರಿಗೆ 1, ವೆಲ್ಲಿಂಗಡನ್ ಕ್ರೆಸೆಂಟ್ ನಿವಾಸವನ್ನು ನೀಡಿತು. ಇಂದಿರಾಗಾಗಿ ಆ ನಿವಾಸವನ್ನು ಅವರ ಕುಟುಂಬ ಸ್ನೇಹಿತ ಮಹಮ್ಮದ್ ಯೂನಸ್ ತೆರವು ಮಾಡಿಕೊಟ್ಟಿದ್ದರು. ಆದರೆ ಜನತಾ ಪಕ್ಷದ ಸರಕಾರ ಆಕ್ಷೇಪಿಸಲಿಲ್ಲ. 'ಮೇಡಂ, ಆ ಬಗ್ಗೆ ಚಿಂತೆ ಬೇಡ. ನಾನು ಕಾರ್ಪೆಟ್ ಗಳನ್ನು ಸುರಕ್ಷಿತವಾಗಿ ಪ್ಯಾಕ್ ಮಾಡಲು ಜನರನ್ನು ಕಳಿಸಿಕೊಡುತ್ತೇನೆ. ನಮ್ಮ ಗೋದಾಮಿನಲ್ಲಿ ಅವುಗಳನ್ನು ಭದ್ರವಾಗಿಡುತ್ತೇವೆ' ಎಂದು ಮೋಹನ್ ಹೇಳಿದಾಗ ಇಂದಿರಾ ಮುಖ ಅರಳಿತು.

ಪಿತ್ರಾರ್ಜಿತ ಆಸ್ತಿಯ ಮೇಲೆ ತೆರಿಗೆ?

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

1991ರಲ್ಲಿ ಭಾರತದ ಆರ್ಥಿಕತೆ ಪಾತಾಳಕ್ಕೆ ಕುಸಿದು, ದೇಶ ದಿವಾಳಿಯಾಗುವ ಹಂತಕ್ಕೆ ತಲುಪಿತ್ತು. ಭಾರತೀಯರ ಚಿನ್ನವನ್ನು ಲಂಡನ್ನಿನ ಬ್ಯಾಂಕಿನಲ್ಲಿ ಅಡವಿಟ್ಟು ವಿಶ್ವಬ್ಯಾಂಕಿನ ಬಳಿಕ ಬೇಡಿ ಸಾಲ ತಂದು ದೇಶ ನಡೆಸಬೇಕಾಯಿತು. 1947 ರಿಂದ 1991ರವರೆಗೆ ಸುಮಾರು 40 ವರ್ಷಗಳ ಕಾಲ ದೇಶವನ್ನಾಳಿದ ನೆಹರು, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿಯವರ ಕೆಟ್ಟ ಆರ್ಥಿಕ ನೀತಿಯ ಪರಿಣಾಮ ಭಾರತ ದಿವಾಳಿ ಹಂತಕ್ಕೆ ತಲುಪಿತ್ತು. ಮನಮೋಹನ್ ಸಿಂಗ್ ಆರ್ಥಿಕ ಸಚಿವರಾದ ನಂತರ ಭಾರತದ ಮಾರುಕಟ್ಟೆಯನ್ನು ಖಾಸಗಿ ಬಂಡವಾಳಶಾಹಿಗಳಿಗೆ ಮುಕ್ತವಾಗಿ ತೆರೆಯಲಾಯಿತು. ಪರಿಣಾಮ ನೆಹರು ಕುಟುಂಬದ ಲೈಸನ್ಸ್ ರಾಜ್ ಪದ್ಧತಿ ಕೊನೆಗೊಂಡಿತು. ಕಾಂಗ್ರೆಸ್ಸಿನವರು ಮನಮೋಹನ್ ಸಿಂಗ್ ಅವರ ಆರ್ಥಿಕ ನೀತಿಯ ಬಗ್ಗೆ ಬೆನ್ನು ತಟ್ಟಿಕೊಳ್ಳುತ್ತಾರೆ. ಆದರೆ ವಂಶಪಾರಂಪರಾಡಳಿತ ನಡೆಸಿ, ಆರ್ಥಿಕತೆಯನ್ನು ಹಾಳು ಮಾಡಿದ್ದರ ಬಗ್ಗೆ ಮಾತನಾಡುವುದಿಲ್ಲ. ಕಮ್ಯುನಿಸ್ಟರ ಸನ್ನಿಗೆ ಒಳಗಾಗಿದ್ದ ನೆಹರು ತಮ್ಮ ಅಧಿಕಾರಾವಧಿಯಲ್ಲಿ ಆಯಕಟ್ಟಿನ ಜಾಗಗಳಲ್ಲಿ ಅವರನ್ನೇ ಪ್ರಮುಖ ಹುದ್ದೆಗಳಲ್ಲಿ ಕೂರಿಸಿದ್ದರು. ವಿದೇಶಿ ಕಮ್ಯುನಿಸ್ಟ್ ಆರ್ಥಿಕ ತಜ್ಞರ ಮಾತುಗಳು ಅವರಿಗೆ ವೇದವಾಕ್ಯವಾಗಿತ್ತು. ಸಮಾಜವಾದದ ಹೆಸರಿನಲ್ಲಿ ಸಂಪತ್ತನ್ನು ಹಂಚಬೇಕೆನ್ನುವುದು ಕಮ್ಯುನಿಸ್ಟರ ಮನಸ್ಥಿತಿ. ಸಂಪತ್ತುಗಳನ್ನು ಹಂಚುವ ಮೊದಲು ಸಂಪಾದಿಸಬೇಕೆಂಬ ಕನಿಷ್ಠ ಜ್ಞಾನ ಜಗತ್ತಿನ ಯಾವ ದೇಶದ ಕಮ್ಯುನಿಸ್ಟರಿಗಿಲ್ಲ. ಆಸ್ತಿ ಸಂಪಾದಿಸಿ ನಂತರ ಹಂಚುವುದು ಉತ್ತಮ ಆರ್ಥಿಕ ನೀತಿಯ ಪ್ರಮುಖ ಲಕ್ಷಣ. ಆಸ್ತಿ ಸಂಪಾದನೆಯಾಗಬೇಕಾದರೆ ಬಂಡವಾಳಶಾಹಿವಾದವನ್ನೂ ಉತ್ತೇಜಿಸಬೇಕು. ಒಂದೆಡೆ ಬಂಡವಾಳ ಮತ್ತೊಂದೆಡೆ ಸಮಾಜವಾದದ ಸಮತೋಲನೆಯಿದ್ದರೆ ಮಾತ್ರ, ಉತ್ತಮ ಆರ್ಥಿಕತೆ ಹೊಂದಿರುವ ದೇಶವನ್ನು ಕಟ್ಟಲು ಸಾಧ್ಯ. ನೆಹರು ಕುಟುಂಬಸ್ಥರು ಜಾರಿಗೊಳಿಸಿದ ಆರ್ಥಿಕ ನೀತಿಗಳಲ್ಲಿ ಸಮತೋಲನೆಯಿರಲಿಲ್ಲ. ದೇಶದ ಪ್ರತಿಯೊಂದು ವ್ಯವಹಾರವನ್ನೂ ಸರಕಾರವೇ ನಿಯಂತ್ರಿಸುತ್ತಿತ್ತು. ಆದರೆ ವ್ಯವಹಾರ ನಡೆಸುವುದು ಸರಕಾರದ ಕೆಲಸವಲ್ಲ. ವ್ಯವಹಾರ ನಡೆಸುವವರಿಗೆ ಉತ್ತಮ ವಾತಾವರಣ ಕಲ್ಪಿಸಿಕೊಡುವುದು ಮಾತ್ರ ಸರಕಾರದ ಕೆಲಸ ಎನ್ನುವುದನ್ನು ಅರ್ಥ ಮಾಡಿಕೊಳ್ಳಲೇ ಇಲ್ಲ.

1992ರಲ್ಲಿ ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರಕಾರ, ನೆಹರು ಕುಟುಂಬಸ್ಥರು ಮಾಡಿದ್ದ ಅನಾಹುತಗಳನ್ನು ಸರಿಪಡಿಸಲು ಭಾರತದ ಆರ್ಥಿಕತೆಯನ್ನು ಜಗತ್ತಿಗೆ ತೆರೆದಿಟ್ಟಿತು. ಇಂದಿರಾ ಗಾಂಧಿ ಅವಧಿಯಲ್ಲಿ ವಿದೇಶದಲ್ಲಿ ಓದಲು ಹೋಗುವವರ ಶಿಕ್ಷಣದ ಖರ್ಚನ್ನು ವಿದೇಶಿ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕಾದರೆ ತಿಂಗಳುಗಳ ಸಮಯ ಬೇಕಿತ್ತು. ಇಲ್ಲಸಲ್ಲದ ಷರತ್ತುಗಳೊಂದಿಗೆ ಸರಕಾರದ ಅನುಮತಿ ಪಡೆದು ಹಣ ವರ್ಗಾಯಿಸಬೇಕಿತ್ತು. ವಿದೇಶದಲ್ಲಿ ಸತ್ತವರ ಮೃತದೇಹವನ್ನು ಭಾರತಕ್ಕೆ ತರಲು ತಿಂಗಳುಗಟ್ಟಲೆ ಸಮಯ ಬೇಕಿತ್ತು, ವಿದೇಶಿ ಕಂಪನಿಗಳು ಭಾರತದಲ್ಲಿ ಬಂಡವಾಳ ಹೂಡಲು ಸಾಧ್ಯವಿರಲಿಲ್ಲ. ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಗಿತ್ತು. ವಿದೇಶಿ ತಂತ್ರಜ್ಞಾನ ದೇಶಕ್ಕೆ ಕಾಲಿಡಲು ಕಾನೂನು ತೊಡಕಿತ್ತು. ಲೈಸನ್ಸ್ ರಾಜ್ ಪರಿಣಾಮ ಭಾರತದ ಅಭಿವೃದ್ಧಿಯಾಗಿರಲಿಲ್ಲ.

ದೇಶ ದಿವಾಳಿ ಹಂತಕ್ಕೆ ತಲುಪಿದ ನಂತರ ಭಾರತವನ್ನು ಮುಕ್ತ ಮಾರುಕಟ್ಟೆಗೆ ತೆರೆದಿಡುವಂತೆ ಮಾಡುವ ಯೋಜನೆಗಳನ್ನು ಜಾರಿಗೆ ತರಲಾಯಿತು. ಆದರೆ ಹಳೆಯ ಚಾಳಿಯಂತೆ 2024ರ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಆಸ್ತಿ ಮರುವಿತರಣೆ ಬಗ್ಗೆ ಪ್ರಸ್ತಾಪಿಸಿದೆ. ರಾಹುಲ್ ಗಾಂಧಿ ಪ್ರಚಾರಕ್ಕೆ ಹೋದ ಜಾಗಗಳಲ್ಲಿ ಈ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿರುವ ಆಸ್ತಿ ಮರು ವಿತರಣೆಯ ಹಿಂದಿರುವವರು, ಜಗತ್ತಿನೆಲ್ಲೆಡೆ ಸೋತು ಸುಣ್ಣವಾಗಿರುವ ಕಮ್ಯುನಿಸ್ಟರು. ಚೀನಾ ದೇಶದ ಮಾವೋ ಸಿದ್ಧಾಂತವನ್ನು ಭಾರತದ ಮೇಲೆ ಹೇರಲು ಪ್ರಯತ್ನ ಪಟ್ಟು ವಿಫಲರಾಗಿ ಭಾರತದ ಹಲವು ರಾಜ್ಯಗಳಲ್ಲಿ ನಕ್ಸಲರ ಸೃಷ್ಟಿಗೆ ಕಾರಣಕರ್ತರಾದವರು. ಕಾಶ್ಮೀರಿ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುವವರು, ಸೈನಿಕರನ್ನು ಅತ್ಯಾಚಾರಿಗಳು ಎನ್ನುವವರು ಸಮಾಜವಾದದ ಮುಖವಾಡ ಧರಿಸಿ ಮತ್ತೊಮ್ಮೆ ದೇಶವನ್ನು 50 ವರ್ಷಗಳ ಹಿಂದೆ ಸರಿಸುವ ಸಂಚಿನಲ್ಲಿ ಭಾಗಿಯಾಗಿದ್ದಾರೆ. ಕಮ್ಯುನಿಸ್ಟರ ಸಿದ್ಧಾಂತಗಳನ್ನು ನಂಬಿದ ಜಗತ್ತಿನ ಆರ್ಥಿಕತೆಗಳು ಕುಸಿದು ಬಿದ್ದಿವೆ, ಅಭಿವೃದ್ಧಿಯ ಪಥದಲ್ಲಿದ್ದ ವೆನೆಜುಲಾ ದೇಶ ಕಮ್ಯುನಿಸ್ಟರ ಆರ್ಥಿಕ ನೀತಿಗಳಿಗೆ ಸಿಕ್ಕು ದಿವಾಳಿಯಾಯಿತು. ಜಿಂಬಾಬ್ವೆ ನೆಲಕಚ್ಚಿತು, ಕಮ್ಯುನಿಸ್ಟ್ ದೇಶ ಚೀನಾ ಮಾತು ಕೇಳಿ ಶ್ರೀಲಂಕಾ ಸರ್ವನಾಶವಾಯಿತು.

ಕಮ್ಯುನಿಸ್ಟರ ಕಪಿಮುಷ್ಟಿಯಲ್ಲಿದ್ದ ರಷ್ಯಾ ವಿಶ್ವದ ಆರ್ಥಿಕತೆಯ ಮೊದಲ ಐದು ಸ್ಥಾನದಿಂದ ಹೊರಬಿದ್ದಿದೆ. ಚೀನಾ ಹೆಸರಿಗಷ್ಟೇ ಕಮ್ಯುನಿಸ್ಟ್ ದೇಶ. ಆದರೆ ಅಮೆರಿಕ ನಂತರ ಜಗತ್ತಿನ ಅತಿ ಹೆಚ್ಚು ಬಿಲೇನಿಯರ್‌ಗಳನ್ನು ಹೊಂದಿರುವ ದೇಶ ಚೀನಾ. ಮಾವೋವಾದಿಗಳ ಮಾತುಗಳನ್ನು ಕೇಳಿ, ನೆಹರು ಭಾರತ ಸ್ವತಂತ್ರಗೊಂಡ ನಾಲ್ಕೇ ವರ್ಷಗಳಲ್ಲಿ ಆಸ್ತಿ ಮರುವಿತರಣೆಯ ಬಗ್ಗೆ ಪ್ರಸ್ತಾಪಿಸಿದ್ದರು. ಒಂದೆಡೆ ಬ್ರಿಟಿಷರು ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದಿದ್ದರು, ಅವರು ದೇಶ ಬಿಟ್ಟ ನಾಲ್ಕೇ ವರ್ಷಗಳಲ್ಲಿ ನೆಹರು ಆಸ್ತಿ ಮರು ವಿತರಣೆಯ ಬಗ್ಗೆ ಪ್ರಸ್ತಾಪಿಸಿದ್ದು ತರ್ಕವೇ ಇಲ್ಲದ ಮಾತು. 1953ರಲ್ಲಿ ನೆಹರು 'ಎಸ್ಟೇಟ್ ತೆರಿಗೆ' ಜಾರಿಗೆ ತಂದರು, ಇದರನ್ವಯ ಪಿತ್ರಾರ್ಜಿತವಾಗಿ ಅಪ್ಪನಿಂದ ಮಕ್ಕಳಿಗೆ ಬರುವ ಆಸ್ತಿಯ ಮೇಲೆ ತೆರಿಗೆ ಹಾಕಲಾಯಿತು. ನೆಹರು ಜಾರಿಗೆ ತಂದಿದ್ದ ಎಸ್ಟೇಟ್ ತೆರಿಗೆ ಪದ್ಧತಿಯಲ್ಲಿ ಶೇ.85ರಷ್ಟು ಪಿತ್ರಾರ್ಜಿತ ಆಸ್ತಿಗೆ ತೆರಿಗೆ ಕಟ್ಟಬೇಕಿತ್ತು. ಇದರ ಪರಿಣಾಮ ದೇಶದಲ್ಲಿ ಕಪ್ಪು ಹಣದೊಂದಿಗೆ ಬೇನಾಮಿ ಆಸ್ತಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಏರಿಕೆಯಾಗಿತ್ತು. ಎಸ್ಟೇಟ್ ತೆರಿಗೆಯೊಂದಿಗೆ 'ವೆಲ್ತ್ ತೆರಿಗೆ'ಯನ್ನೂ ಕಾಂಗ್ರೆಸ್ ಜಾರಿಗೆ ತಂದಿತ್ತು. ಇದರ ಪ್ರಕಾರ, ತಂದೆಯಿಂದ ಪಿತ್ರಾರ್ಜಿತವಾಗಿ ಮಕ್ಕಳಿಗೆ ಬರುವ ಆಸ್ತಿಗೂ ತೆರಿಗೆ ಕಟ್ಟಬೇಕಿತ್ತು ಮತ್ತು ಪ್ರತಿವರ್ಷ ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೂ ವೆಲ್ತ್ ತೆರಿಗೆ ಕಟ್ಟಬೇಕಿತ್ತು.

1985ರಲ್ಲಿ ವಿ.ಪಿ.ಸಿಂಗ್ ವಿತ್ತ ಸಚಿವರಾಗಿದ್ದ ಸಂದರ್ಭದಲ್ಲಿ ನೆಹರು ಜಾರಿಗೊಳಿಸಿದ್ದ ಎಸ್ಟೇಟ್ ತೆರಿಗೆಯನ್ನು ತೆಗೆದುಹಾಕಿದರು.ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದ ನಂತರ 2016ರಲ್ಲಿ ವೆಲ್ತ್ ತೆರಿಗೆಯನ್ನು ತೆಗೆದು ಹಾಕಿದರು. 1971ರಲ್ಲಿ ಇಂದಿರಾಗಾಂಧಿ ತಮ್ಮ ಪಕ್ಷವೇ 24 ವರ್ಷಗಳ ಕಾಲ ಆಡಳಿತ ನಡೆಸಿದ ನಂತರ 'ಗರೀಬಿ ಹಠಾವೋ' ಎಂಬ ಘೋಷವಾಕ್ಯದೊಂದಿಗೆ ಚುನಾವಣೆಯಲ್ಲಿ ಗೆದ್ದರು. ಅಧಿಕಾರಕ್ಕೆ ಬಂದ ನಂತರ ತಮ್ಮ ತಂದೆಯಂತೆ ಕಮ್ಯುನಿಸ್ಟರ ಸಲಹೆಯ ಮೇರೆಗೆ ಶೇ.85ಷ್ಟು ಆದಾಯ ತೆರಿಗೆಯನ್ನು ಜನರ ಮೇಲೆ ಹೇರುವ ಮೂಲಕ ಮತ್ತೊಂದು ಕೆಟ್ಟ ಆರ್ಥಿಕ ನೀತಿಗೆ ನಾಂದಿ ಹಾಡಿದರು. ಅದರ ಪರಿಣಾಮ ಭಾರತದಲ್ಲಿ ಕಪ್ಪುಹಣದ ವ್ಯವಹಾರಗಳಲ್ಲಿ ಏರಿಕೆಯಾಯಿತು.

ರಾಜೀವ್ ಗಾಂಧಿಯ ಪರಮಮಿತ್ರ 'ಸ್ಯಾಮ್ ಪಿತ್ರೋಡ' ಈಗ ಮತ್ತೊಮ್ಮೆ ಪಿತ್ರಾರ್ಜಿತ ಆಸ್ತಿಯ ಮೇಲೆ ತೆರಿಗೆ ಹೇರುವ ಬಗ್ಗೆ ಖಾಸಗಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಭಾರತಕ್ಕೆ ಮಾಹಿತಿ ಮತ್ತು ತಂತ್ರಜ್ಞಾನದ ಕ್ರಾಂತಿಯನ್ನು ರಾಜೀವ್ ಗಾಂಧಿ ಪರಿಚಯಿಸಿದ್ದರ ಹಿಂದಿನ ಕೈ ಸ್ಯಾಮ್ ಪಿತ್ರೋಡನದ್ದು ಎಂದು ಕಾಂಗ್ರೆಸ್ಸಿನವರು ಹೇಳುತ್ತಿರುತ್ತಾರೆ. ಆದರೆ ರಾಜೀವ್ ಗಾಂಧಿ ಪ್ರಧಾನಿಯಾಗುವ ಮೊದಲೇ ದೇಶದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಆಧಾರಿತ ಕಂಪನಿಗಳು ಸ್ಥಾಪನೆಯಾಗಿದ್ದವು. ತನ್ನ ಮಿತ್ರ ಹೇಳಿದ ಮಾತನ್ನು ಚಾಚು ತಪ್ಪದೆ ಪಾಲಿಸುವುದು ರಾಜೀವ್ ಗಾಂಧಿಯವರ ಗುಣವಾಗಿತ್ತು. ರಾಜೀವ್ ನಿಧನದ ಬಳಿಕ ಸೋನಿಯಾ ಮತ್ತು ರಾಹುಲ್ ಗಾಂಧಿಯವರು ಸ್ಯಾಮ್ ಪಿತ್ರೋಡ ಸಲಹೆಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದರು. ಈಗಲೂ ಪರಿಗಣಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಅನಿವಾಸಿ ಘಟಕದ ಅಧ್ಯಕ್ಷರಾಗಿರುವ ಸ್ಯಾಮ್ ಪಿತ್ರೋಡ ರಾಹುಲ್ ಗಾಂಧಿ ವಿದೇಶದಲ್ಲಿ ಭಾಗಿಯಾಗುವ ಕಾರ್ಯಕ್ರಮಗಳನ್ನು ಯೋಜನೆ ಮಾಡುತ್ತಾನೆ. ರಾಹುಲ್ ಗಾಂಧಿ ವಿದೇಶಗಳಲ್ಲಿ ಭಾರತದ ವಿರುದ್ಧ ನೀಡುವ ಹೇಳಿಕೆಗಳ ಹಿಂದಿನ ಕೈ 'ಸ್ಯಾಮ್ ಪಿತ್ರೋಡ' ಅಮೆರಿಕ ದೇಶದ ಆರು ರಾಜ್ಯಗಳಲ್ಲಿ ಪಿತ್ರಾರ್ಜಿತ ಅಸ್ತಿ ಮಕ್ಕಳಿಗೆ ಬಂದಾಗ ಶೇ.55ರಷ್ಟು ತೆರಿಗೆಯನ್ನು ಅಂದಿನ ಮಾರುಕಟ್ಟೆಯ ಮೌಲ್ಯದ ಮೇಲೆ ಕಟ್ಟಬೇಕೆಂಬ ಕಾಯ್ದೆ ಜಾರಿಯಲ್ಲಿದೆ. ಜಪಾನ್‌ನಲ್ಲಿಯೂ ಶೇ.55ರಷ್ಟು ತೆರಿಗೆ ಕಟ್ಟಬೇಕೆಂಬ ಕಾಯಿದೆ ಜಾರಿಯಲ್ಲಿದೆ. ಅದೇ ಮಾದರಿಯಲ್ಲಿ ಪಿತ್ರಾರ್ಜಿತ ಆಸ್ತಿಯ ಮೇಲೆ ತೆರಿಗೆ ಹೇರುವ ಕಾನೂನನ್ನು ಭಾರತದಲ್ಲೂ ಜಾರಿಗೆ ತರಬೇಕಾಗುತ್ತದೆಯೆಂಬ ವಿಷಯವನ್ನು ಸ್ಯಾಮ್ ಪಿತ್ರೋಡ ಪ್ರಸ್ತಾಪಿಸಿದ್ದಾರೆ. ಗಾಂಧಿ ಕುಟುಂಬದ ಪರಮಾಪ್ತನ ಬಾಯಲ್ಲಿ ಬಂದ ಮೇಲೆ, ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೂ ಒಪ್ಪಲೇ ಬೇಕು.

ಕಾಂಗ್ರೆಸ್ ಮತ್ತು ಮುಸಲ್ಮಾನರ ಓಲೈಕೆ ರಾಜಕಾರಣ ರೈಲು ಹಳಿಗಳಿದ್ದಂತೆ, ಸ್ವಾತಂತ್ರ್ಯ ಪೂರ್ವದಿಂದಲೂ ಎರಡೂ ಹಳಿಗಳು ಒಟ್ಟಿಗಿರುತ್ತವೆ. ಮುಸಲ್ಮಾನರ ಮತಬ್ಯಾಂಕನ್ನು ಗಟ್ಟಿ ಮಾಡಿಕೊಳ್ಳಲು 'ವಕ್ಫ್' ಕಾಯಿದೆಯನ್ನು ಜಾರಿಗೆ ತಂದರು. ಇಂದು ಭಾರತದಲ್ಲಿ ಅತಿ ಹೆಚ್ಚು ಆಸ್ತಿಯನ್ನು ಹೊಂದಿರುವವರಲ್ಲಿ ವಕ್ಫ್ ಬೋರ್ಡ್ ಭಾರತೀಯ ರೈಲ್ವೆ ನಂತರದ ಸ್ಥಾನದಲ್ಲಿದೆ. ಒಂದು ಅಂದಾಜಿನ ಪ್ರಕಾರ ಸುಮಾರು 3,00,000 ಕೋಟಿ ಮೌಲ್ಯದ ಆಸ್ತಿ ವಕ್ಫ್ ಮಂಡಳಿಯಲ್ಲಿದೆ. ರಾಹುಲ್ ಗಾಂಧಿಗೆ ವಕ್ಫ್ ಬೋರ್ಡಿನ ಆಸ್ತಿಯನ್ನು ಮರು ವಿತರಣೆ ಮಾಡುತ್ತೇವೆಂದು ಹೇಳುವ ಧೈರ್ಯವಿದೆಯೇ? ಶ್ರೀಕೃಷ್ಣನ ಸ್ಥಾನ ದ್ವಾರಕದಲ್ಲಿರುವ ದ್ವೀಪವನ್ನು ವಕ್ಫ್ ಆಸ್ತಿ ಎಂದು ವಕ್ಫ್ ಬೋರ್ಡ್ ವಾದ ಮಾಡಿತ್ತು, ಸೂರತ್ ನಗರದ ಪಾಲಿಕೆಯ ಕಟ್ಟಡವನ್ನು ತನ್ನ ಆಸ್ತಿಯೆಂದು ಹೇಳಿತ್ತು. ಕರ್ನಾಟಕದಲ್ಲಿಯೂ ವಕ್ಫ್ ಮಂಡಳಿಗೆ ಸೇರಿದ ಸಾವಿರಾರು ಕೋಟಿ ಮೌಲ್ಯದ ಆಸ್ತಿಯಿದೆ, ವಕ್ಫ್ ಆಸ್ತಿ ಮರು ವಿತರಣೆಯ ಬಗ್ಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೇಳಿಲ್ಲ.

2006ರಲ್ಲಿ ಕಾಂಗ್ರೆಸ್ಸಿನ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಭಾರತದಲ್ಲಿರುವ ಆಸ್ತಿಯ ಮೇಲೆ ಮುಸಲ್ಮಾನರಿಗೆ ಮೊದಲ ಹಕ್ಕಿದೆಯೆಂದು ತಮ್ಮ ಭಾಷಣದಲ್ಲಿ ಹೇಳಿದ್ದರು. ಇವರ ಮಾತುಗಳನ್ನೇ ಅನೇಕ ಕಾಂಗ್ರೆಸ್ ನಾಯಕರು ಬೇರೆ ಬೇರೆ ರಾಜ್ಯಗಳಲ್ಲಿ ಹೇಳುತ್ತಾ ಬಂದಿದ್ದಾರೆ. 50 ಪುಟಗಳ ಬಯೋ ಡೇಟಾ ಹೊಂದಿರುವ ಆರ್ಥಿಕ ತಜ್ಞ ಮನಮೋಹನ್ ಸಿಂಗ್ ಬಾಯಲ್ಲಿ ಸುಮ್ಮನೆ ಮಾತುಗಳು ಬರುವುದಿಲ್ಲ, ಕಾಂಗ್ರೆಸ್ಸಿನ ಓಲೈಕೆ ರಾಜಕಾರಣ ಈ ಮಾತುಗಳನ್ನಾಡಿಸುವಂತೆ ಮಾಡುತ್ತವೆ. ಅವರ ಮಾತು ಕೇವಲ ಮಾತಿಗೆ ನಿಲ್ಲಲಿಲ್ಲ, ಅಧಿಕಾರಕ್ಕೆ ಬಂದ ರಾಜ್ಯಗಳಲ್ಲಿ ಹೆಚ್ಚಿನ ಹಣವನ್ನು ಮುಸಲ್ಮಾನರ ಯೋಜನೆಗಳಿಗೆ ಕಾಂಗ್ರೆಸ್ ಸರಕಾರ ಮೀಸಲಿಡುತ್ತಾ ಬಂದಿದೆ. 1947ರಲ್ಲಿ ಅಖಂಡ ಭಾರತ ಧರ್ಮದ ಆಧಾರದ ಮೇಲೆ ವಿಭಜನೆಯಾದ ನಂತರ ರಚಿತವಾದ ಭಾರತದ ಸಂವಿಧಾನದಲ್ಲಿ 'ಜಾತ್ಯತೀತ' ಎಂಬ ಪದವೇ ಇರಲಿಲ್ಲ. ಆದರೆ ಇಂದಿರಾಗಾಂಧಿ ಸಂವಿಧಾನದ ಮೂಲವನ್ನೇ ಬದಲಾಯಿಸಿ 'ಜಾತ್ಯತೀತ'ಎಂಬ ಪದವನ್ನು ಸೇರಿಸಿಬಿಟ್ಟರು. ಇಂದಿರಾ ಗಾಂಧಿಯವರಿಗೆ 'ಜಾತ್ಯತೀತ' ಪದವನ್ನು ಸೇರಿಸಿಯೆಂಬ ಸಲಹೆಯನ್ನು ನೀಡಿದವರೇ ಎಡಚರರು. ಮುಸಲ್ಮಾನರ ಓಲೈಕೆಯ ಬಗ್ಗೆ ಮಾತನಾಡುವಾಗ ಕಾಂಗ್ರೆಸ್ ಜಾತ್ಯತೀತ ಪದವನ್ನು ತನ್ನ ಗುರಾಣಿಯನ್ನಾಗಿಸಿಕೊಳ್ಳುತ್ತದೆ. ಒಂದೆಡೆ 'ಭಾರತ' ಲೈಸನ್ಸ್ ರಾಜ್ ಸಂಸ್ಕೃತಿಯಿಂದ ಹೊರಬಂದು ಅಭಿವೃದ್ಧಿಯೆಡೆಗೆ ಮುನ್ನುಗ್ಗುತ್ತಿದ್ದರೆ, ಕಾಂಗ್ರೆಸ್ ಮಾತ್ರ ತನ್ನ ಪ್ರಣಾಳಿಕೆಯಲ್ಲಿ ಮತ್ತೊಮ್ಮೆ ಮಾವೋವಾದಿಗಳ ಸಲಹೆಯಂತೆ ತನ್ನ ಹಳೆಯ ತಪ್ಪುಗಳನ್ನು ಮತ್ತೆ ಮರುಕಳಿಸುವ ಮುನ್ಸೂಚನೆ ನೀಡಿದೆ. ಆಸ್ತಿಗಳನ್ನು ಸಮೀಕ್ಷೆ ಮಾಡಿಸಿ ಮರು ವಿತರಣೆ ಮಾಡುವ ಯೋಜನೆ, ಪಿತ್ರಾರ್ಜಿತ ಆಸ್ತಿಯ ಮೇಲೆ ತೆರಿಗೆ ಹೇರುವ ಯೋಚನೆಯನ್ನು ಮಾಡಿದೆ.ಒಟ್ಟಾರೆ ಒಟ್ಟಾರೆ ಭಾರತವನ್ನು 50 ವರ್ಷಗಳ ಹಿಂದಕ್ಕೆ ದೂಡುವ ಯೋಚನೆಗಳು ಕಾಂಗ್ರೆಸ್ಸಿಗರ ಮಾತುಗಳಲ್ಲಿ ಅರ್ಥವಾಗುತ್ತಿದೆ.

ಖಾರ್ವಿಕೇರಿಯಲ್ಲಿ ಮತದಾನದ ಆ ದಿನ

ಅಂತರ್ಗತ

ಜಯಪ್ರಕಾಶ ಪುತ್ತೂರು
vveditoped@gmail.com

ಮಣಿಪಾಲದಲ್ಲಿ ಬ್ಯಾಂಕ್‌ನ ಕೇಂದ್ರ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಉಡುಪಿ ವಾಸ್ತವ್ಯದ ವೇಳೆ, ನಮಗೆಲ್ಲಾ ಈ ಚಾರಿತ್ರಿಕ ನಗರ ವಿವಿಧ ಆಸಕ್ತಿದಾಯಕ ವಿಚಾರಗಳಲ್ಲಿ ತೊಡಗಿಸಲು ವಿಪುಲ ಅವಕಾಶಗಳನ್ನು ತೆರೆದಿಟ್ಟಿತ್ತು. ಆಗ ನೋಡಿದರೆ ಬೆಂಗಳೂರು ಮೈಸೂರು ಬಿಟ್ಟರೆ ಅತ್ಯಂತ ಚಟುವಟಿಕೆಯ ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಧಾರ್ಮಿಕ ಕೇಂದ್ರ ಉಡುಪಿ, ರಥಬೀದಿ ಗೆಳೆಯರು, ರಂಗಭೂಮಿ ಸುಚಿತ್ರಾ ಫಿಲಂ ಸೊಸೈಟಿ, ಜೇಸಿಸ್ ಹೀಗೆ ಒಂದೇ... ಎರಡೇ...? ಆ ವೇಳೆಯಲ್ಲಿ ಕು.ಶಿ. ಹರಿದಾಸ ಭಟ್ಟ, ಟಿ.ಎ.ಪೈ, ಮುರಾರಿ ಬಲ್ಲಾಳ– ಹೀಗೆ ವಿವಿಧ ಕ್ಷೇತ್ರಗಳ ಉದ್ದಾಮ ನಾಯಕರು ಈ ಪರಿಸರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು.

ಮಣಿಪಾಲದ ಬ್ಯಾಂಕ್ ಸಿಬ್ಬಂದಿಗಳೇ ಸೇರಿ ಸಂಘಟಿಸಿದ ಮಣಿಪಾಲ ಯುನಿಟ್‌ನಲ್ಲಿ ಒಂದು ರೀತಿಯಲ್ಲಿ ವೈಟ್ ಕಾಲರ್ ಉದ್ಯೋಗಿಗಳೆಲ್ಲಾ ಸೇರಿಕೊಂಡ ಕಾರಣ ಶಿಸ್ತು ಹಾಗೂ ಕಾರ್ಯಕ್ಷಮತೆಗೆ ಹೆಸರು ವಾಸಿಯಾಗಿತ್ತು. ಇಲ್ಲವಾದರೆ ಈ ನಾಗರಿಕ ರಕ್ಷಣೆಯ ತಂಡಕ್ಕೆ ಯಾವಾಗ ಸುಶಿಕ್ಷಿತ ವ್ಯಕ್ತಿಗಳ ಸೇರ್ಪಡೆ ಕಡಿಮೆ. ಹೀಗಾಗಿ ನಾವೆಲ್ಲಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ತಂಡದ ಕಾರ್ಯ ಚಟುವಟಿಕೆಗಳಿಂದ ಹೆಸರುವಾಸಿಯಾಗಿದ್ದೆವು. ನಾಗರಿಕ ರೆಫ್ಯೆಲ್ ತರಬೇತಿ, ಅನ್ ಅರ್ಮಡ್ ಕೊಂಬಾಟ್ ಹಾಗೂ ಅಗ್ನಿಶಾಮಕ ಸೇವಾ ತರಬೇತಿ ಇವುಗಳೆಲ್ಲಾ ನಮ್ಮನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸಿದ್ದವು.

ಮುಖ್ಯವಾಗಿ ಸಿಂಡಿಕೇಟ್ ಬ್ಯಾಂಕ್‌ನ ಕೇಂದ್ರ ಕಚೇರಿಯೂ ಇಂತಹ ಸಮಾಜಮುಖಿಯಾದ ಚಟುವಟಿಕೆಗಳಿಗೆ ತನ್ನ ಸಿಬ್ಬಂದಿಗಳಿಗೆ ಪ್ರೋತ್ಸಾಹ ಹಾಗೂ ನೆರವನ್ನು ಸದಾ ನೀಡುವ ಕಾರಣ ಎಲ್ಲವೂ ಸುಗಮವಾಗಿ ಸಾಗುತ್ತಿತ್ತು. ನಮ್ಮ 5 ವರ್ಷದ ಅವಧಿಯಲ್ಲಿ ಅಖಿಲ ಭಾರತ ಬಂದ್, ವಿವಿಧ ಮುಷ್ಕರಗಳು, ಚುನಾವಣೆಗಳು, ಪರ್ಯಾಯ ಸಮಾರಂಭ, ವಿವಿಐಪಿ ಬಂದೋಬಸ್ತ್– ಹೀಗೆ ಹಲವು ಸಂದರ್ಭಗಳಲ್ಲಿ ಸ್ಥಳೀಯ ಪೊಲೀಸ್ ಇಲಾಖೆಗೆ ನೆರವು ನೀಡುವ ಅವಕಾಶ ಲಭಿಸಿತ್ತು. ಮಂಗಳೂರು, ಉಡುಪಿ ನಗರಗಳಲ್ಲಿ ವಿವಿಐಪಿ ಭೇಟಿ ವೇಳೆ ಟ್ರಾಫಿಕ್ ಸಿಗ್ನಲ್‌ಗಳಲ್ಲಿ, ವಿವಿಧ ಸ್ಟೇಷನ್‌ಗಳಲ್ಲಿ ಹಾಗೂ ಗಸ್ತು ತಿರುಗುವ ವಾಹನ ಹೀಗೆ ಹತ್ತು ಹಲವು ಅವ ಕಾಶಗಳು ನಮಗೆ ಹೊಸ ಅನುಭವದ ಪಾಠಗಳನ್ನು ನೀಡಿತ್ತು. ಎಷ್ಟೋ ವೇಳೆ ನಗರದ ಪರಿಚಿತ ಪತ್ರಕರ್ತರು ಅಭಿಮಾನ ಪೂರ್ವಕವಾಗಿ ನೋಡಿ, 'ಏನ್ ಸಾರ್, ಈ ಶ್ರಮ ನಿಮಗೆ ಬೇಕಿತ್ತಾ?' ಎಂದು ಆಶ್ಚರ್ಯಪಡುತ್ತಿದ್ದರು. ಚುನಾವಣೆ ಸಿಬ್ಬಂದಿಗಳೊಂದಿಗೆ ತಾಲೂಕು ಕಚೇರಿಯಿಂದ ವಿವಿಧ ಹಳ್ಳಿ ಗಳಿಗೆ ಮತದಾನದ ಸಲಕರಣೆಯೊಂದಿಗೆ ಪ್ರಯಾಣ ಹಳ್ಳಿ ಶಾಲೆಗಳಲ್ಲಿ ರಾತ್ರಿ ವಾಸ್ತವ್ಯ ಕನಿಷ್ಠ ಸೌಲಭ್ಯಗಳಿಲ್ಲದಿದ್ದರೂ, ಅನುಭವ ಪಡೆಯುವ ನೆಲೆಯಲ್ಲಿ ಒಂದು ತರದ ಉತ್ಸಾಹ. ಈಗ ಆ ದಿನಗಳನ್ನು ಜ್ಞಾಪಿಸಿಕೊಂಡರೆ ಮೈ ಜುಮ್ ಎನ್ನಿಸುತ್ತದೆ.

ಕೋಟ ಗ್ರಾಮದ ಹಳ್ಳಿಯ ಸರಕಾರಿ ಶಾಲೆಯ ವಾಸ್ತವ್ಯದ ವೇಳೆ ಹಂಚುಗಳು ಬಿದ್ದು ಹೋಗಿದ್ದ, ಸೊಳ್ಳೆಕಾಟದ, ಸ್ನಾನ ಶೌಚಗಳ ಸೌಲಭ್ಯ ಕಾಣದೇ ಕಷ್ಟಪಟ್ಟ ಆ ರಾತ್ರಿಗಳು. ಆ ಊರಿನ ಸಜ್ಜನರೊಬ್ಬರು ಹಿಂದಿನ ಕಾಲದ ಪಟೇಲ ವಂಶದವರು. ಈ ನಮ್ಮ ವಿಷಯ ತಿಳಿದು, ಮುಂಜಾನೆ ಶಾಲೆಗೆ ಬಂದು ಒತ್ತಾಯ ಪೂರ್ವಕವಾಗಿ ಮನೆಗೆ ಕರೆದೊಯ್ದು ಸ್ನಾನ, ಉಪಚಾರ ಎಲ್ಲಾ ವ್ಯವಸ್ಥೆ ಮಾಡಿ ಅಭಿಮಾನ ತೋರಿ ದಾಗ ಪರವಾಗಿಲ್ಲ, ಈ ದಿನಗಳಲ್ಲಿಯೂ ಹಳ್ಳಿಗಳಲ್ಲಿ ಒಳ್ಳೆಯ ನಾಯಕರುಗಳಿಗೆ ಕೊರತೆ ಆಗಿಲ್ಲ ಎಂದು ಸಮಾಧಾನ ಮೂಡಿತ್ತು.

ಈ ಎಲ್ಲಾ ಅನುಭವಗಳ ನಡುವೆ ಈಗಲೂ ಮನುಷ್ಯರಲ್ಲಿ ಅಚ್ಚಳಿಯದೇ ಉಳಿದ ಒಂದು ಘಟನೆಯನ್ನು ಪ್ರಸ್ತಾಪಿಸುವುದು ಅತ್ಯಂತ ಪಸ್ತುತ. ಆ ವೇಳೆ ಲೋಕಸಭಾ ಚುನಾವಣೆಯ ವಿವಿಧ ಪ್ರಕ್ರಿಯೆಗಳು ಮುಗಿದು ನಮಗೆಲ್ಲಾ ಕರ್ತವ್ಯದ ಬಗ್ಗೆ ತರಬೇತಿ ಹಾಗೂ ವಿಚಾರಗಳನ್ನು ತಿಳಿಹೇಳಿದ ನಂತರ, ಹಳ್ಳಿಯ ವಿವಿಧ ಮತದಾನ ಕೇಂದ್ರಗಳಿಗೆ ಚುನಾವಣಾ ಅಧಿಕಾರಿ ಹಾಗೂ ವಿವಿಧ ಸಿಬ್ಬಂದಿಗಳೊಂದಿಗೆ ಸಮವಸ್ತ್ರ ತೊಟ್ಟು ಲಾಠಿ ಹಿಡಿದು ಸಾಗಿದ್ದು. ಹಿಂದಿನ ದಿನವೇ, ಅಲ್ಲಿನ ಸರಕಾರಿ ಶಾಲೆಗಲ್ಲಿ ರಾತ್ರಿ ವಾಸ್ತವ್ಯ ಹಾಗೂ ಮತದಾನದ ಸಲಕರಣೆ ಹಾಗೂ ದಾಖಲೆಗಳಿಗೆ ಕಾವಲು ಕಾಯುವ ಡ್ಯೂಟಿ ಲಭಿಸಿತ್ತು. ಆ ವೇಳೆ ನನಗೆ ಕುಂದಾಪುರದ ನಗರದ ಪಕ್ಕದ 'ಖಾರ್ವಿಕೇರಿ' ಎಂಬ ಬಡಾವಣೆಯಲ್ಲಿ ಡ್ಯೂಟಿ ಲಭಿಸಿತ್ತು. ಈ ಬಡಾವಣೆಯಲ್ಲಿ ಮೂಲತಃ ಖಾರ್ವಿಗಳೆಂಬ ಮೀನುಗಾರರು ವಾಸ್ತವ್ಯ ಮಾಡಿದ್ದು ಅವರೆಲ್ಲಾ ಸದಾ ಒಂದಲ್ಲ ಒಂದು ಗಲಾಟೆ, ದೊಂಬಿಗಳಲ್ಲಿ ತೊಡಗುವ ಪ್ರತೀತಿಯಿತ್ತು. ಕೆಲವು ತಿಂಗಳ ಹಿಂದೆ ಅಲ್ಲಿ ಅಣ್ಣು ಖಾರ್ವಿ ಎಂಬ ವ್ಯಕ್ತಿಯ ಆಕಸ್ಮಿಕ ಮರಣ ಸ್ಥಳೀಯ ಪೊಲೀಸ್ ಠಾಣೆಯಲ್ಲಿಯೇ ಬಂಧಿಸಿರುವಾಗ ಆಗಿದ್ದು– ಊರಿನಲ್ಲಿ ತುಂಬಾ ಕೊಲಾಹಲ ಉಂಟುಮಾಡಿತ್ತು.

ಹೇಳಿಕೇಳಿ ಖಾರ್ವಿಗಳಿಗೆ ಪೋಲಿಸರು ಅಂದರೆ ತೀರಾ ಸಿಟ್ಟು ಹಾಗೂ ಜಿಗುಪ್ಸೆ ಬಂದಿತ್ತು. ಹೀಗಾಗಿ, ಅಂದು ಬೆಳಗ್ಗೆ ನಾವೆಲ್ಲಾ ಚುನಾವಣೆಯ ಕರ್ತವ್ಯಕ್ಕೆ ಸಿದ್ಧರಾಗಿ ನಿಂತರೆ ನಮಗೆಲ್ಲಾ ಯಾವಾಗ ಸಂಜೆ ಆಗಿ ನಮ್ಮೆಲ್ಲರ ಡ್ಯೂಟಿ ಯಾವಾಗ ಮುಗಿಯುತ್ತದೆ ಎಂಬ ಚಿಂತೆ. ದೇವರ ದಯದಿಂದ ಅಲ್ಲಿಯವರೆಗೆ ಎಲ್ಲವೂ ಶಾಂತವಾಗಿ ಕಳೆಯುವುದು ಎಂದುಕೊಂಡಿದ್ದರೆ, 12 ಘಂಟೆಗೆ ಸರಿಯಾಗಿ ನಾವು ಭಯ ನಿರೀಕ್ಷೆಮಾಡಿದ ಪ್ರಸಂಗವೊಂದು ನಡೆದೇ ಹೊಯಿತು!

ಮುಸ್ಲಿಂ ಮಹಿಳೆಯೊಬ್ಬರು ಮತದಾನಗಟ್ಟೆಗೆ ಚೀಟಿ ಪಡೆದು ಸಾಗುವ ವೇಳೆ ಹಿರಿಯೊರ್ವರು ಮತದಾನದ ಕಟ್ಟೆಯ ಒಳಗಿನ ಆವರಣದಿಂದ ಸಾಗಿ ಆಕೆಗೆ ದಾರಿತೋರಿಸಿದ ಒಂದು ಸಣ್ಣ ಪ್ರಸಂಗ. ನೋಡಿ, ಅದೇ ಇವರಿಗೆ ಸಾಕಾಗಿ ಹೋಯಿತು. ಪಕ್ಕದಲ್ಲಿದ್ದ ರಾಜಕೀಯ ಪಕ್ಷದ ಏಜೆಂಟ್ ಗುಡಾರದಿಂದ ಆಗಮಿಸಿದ ಕೆಲವೊಂದು ಯುವಕರು ಆಕ್ಷೇಪಣೆ ಮಾಡುತ್ತಾ ಗೊಂದಲವನ್ನು ಆರಂಭಿಸಿದರು. ನನ್ನ ಜತೆಯಲಿದ್ದ ಪೋಲಿಸ್ ಕಾನ್ಸ್‌ಟೇಬಲ್ ಗೌಡ ಕೂಡಲೇ ಅವರನ್ನು ಸಮಾಧಾನಿಸಲು ಪ್ರಯತ್ನಿಸಿದರೂ ಶಾಂತವಾಗಲಿಲ್ಲ. ತೀವ್ರವಾಗಿ ಅವರ ಪ್ರತಿಭಟನೆಯ ಭರ ಮುಂದುವರಿಯಿತು. ಆಗಿನ್ನೂ ಮೊಬೈಲ್ ಬಿಡಿ, ಆ ಶಾಲೆಯಲ್ಲಿ ಫೋನ್ ಕೂಡಾ ಇರಲಿಲ್ಲ. ಆಗಾಗ್ಗೆ ಬಂದು ಹೋಗಬೇಕಿದ್ದ ಗಸ್ತು ವಾಹನದ ಪತ್ತೆಯಿಲ್ಲ. ಆ ಸಮಯದಲ್ಲಿ ವಾಕಿಟಾಕಿ ಸಾಧನವೂ ಕಂಡುಬರಲಿಲ್ಲ, ನನಗೂ ಜೀವಮಾನದ ಅತ್ಯಂತ ಕಟ್ಟೆಚ್ಚರದ ಕ್ಷಣಗಳು ಎಂದು ಭಾಸವಾಗಿ ಹೇಗೆ ವರ್ತಿಸಲಿ ಎಂಬ ಚಿಂತೆ. ಪೋಲಿಸ್ ಸಿಬ್ಬಂದಿ ಗೌಡರಿಗೆ ವಿನಂತಿಸಿದೆ. 'ಏನ್ರೀ... ಏನು ಮಾಡುತ್ತೀರಿ? ನೀವು ಲಾಠಿ ಹಿಡಿದು ಮುಂದೆ ಹೋಗಿ' ಎಂದೆ. ಅದಕ್ಕೆ ಉತ್ತರವಾಗಿ ಗೌಡರು ಪ್ರತಿಕ್ರಿಯಿಸಿದನ್ನು ಕೇಳಿ ನನ್ನ ಜಂಘಾಬಲ ಕುಸಿದುಹೋಯಿತು.

'ಸರ್, ಈ ಅಣ್ಣು ಖಾರ್ವಿ ಪ್ರಸಂಗದಿಂದ ಪೋಲಿಸರಿಗೆ ಇಲ್ಲಿ ಮರ್ಯಾದೆ ಇಲ್ಲದಂತಾಗಿದೆ. ನೀವು ನಾಗರಿಕರು, ಅಲ್ಲದೆ ಈ ಊರಿನ ಹೆಣ್ಣನ್ನು ವಿವಾಹವಾಗಿ ಒಂದು ಸಂಬಂಧ ಇದ್ದವರು. ನೀವೇ ಮಾತಾಡಿ ನೋಡಿ ಸರ್...' ಎಂದರು. ನನಗಾದರೂ ಒಂದು ದೊಡ್ಡ ಉದ್ರಿಕ್ತ ಗುಂಪನ್ನು ಎದುರು ಹಾಕಿಕೊಳ್ಳುವುದು ಪ್ರಥಮ ಅನುಭವ. ಆಗಲೇ ನೂರು, ಇನ್ನೂರು ಜನ ಓಡುತ್ತಾ ಬಂದು ಜಮಾಯಿಸಿದ್ದರು ಏನೇ ಆಗಲಿ ಬಂದುದನ್ನು ನೋಡೋಣ ಎಂದು ಎಲ್ಲಾ ಧೈರ್ಯವನ್ನು ತಂದುಕೊಂಡು ಮುಂದೆ ಬಂದು,

''ನೋಡ್ರಪ್ಪಾ ಒಂದ್ನಿಮಿಷ ನನ್ನ ಮಾತುಕೇಳಿ...'' ಎಂದು ಕೈಮುಗಿದು ಕೇಳಿಕೊಂಡೆ. ಇದೊಂದು ಸಣ್ಣ ಘಟನೆ. ಇಲ್ಲಿ ಹಿರಿಯರೊಬ್ಬರು ಮಹಿಳೆಗೆ ಸಹಾಯ ಮಾಡಲು ಅಲ್ಲಿವರೆಗೆ ಸಾಗಿ ಹಿಂದೆ ಬಂದಿದ್ದಾರೆ. ವಿಶೇಷವಾಗಿ ಯಾವುದೇ, ಪ್ರಮಾದ ಅಥವಾ ಯಾರಿಗೂ ಅನ್ಯಾಯ ಆಗಿಲ್ಲ. ದಯಮಾಡಿ ವೃಥಾ ಹೀಗೆ ಮಾಡಬೇಡಿ, ನೋಡಿ ನಾನು ಖಾಕಿ ಹಾಕಿಕೊಂಡು ಬಂದಿರುವ ಓರ್ವ ಬ್ಯಾಂಕ್ ಅಧಿಕಾರಿ, ಒಂದು ಕರ್ತವ್ಯದ ಉದ್ದೇಶದಿಂದ ಬಂದಿದ್ದೇನೆ. ಅಲ್ಲದೆ ನಿಮ್ಮ ಊರಿನ ಅಳಿಯ. ಪಕ್ಕದ ಗ್ರಾಮದ ಹೆಣ್ಣು ಮಗಳನ್ನು ವಿವಾಹವಾಗಿದ್ದೇನೆ. ನಾನು ನಿಮ್ಮವನೇ, ನನ್ನ ಮಾತು ಕೇಳಿ. ದಯಮಾಡಿ ಎಲ್ಲರೂ ಹಿಂದೆ ಸರಿಯಿರಿ, ದೂರ ಸಾಗಿರಿ, ಗಲಾಟೆ ಮಾಡದಿರಿ, ನೀವು ಇಲ್ಲಿ ಏನಾದರೂ ಹಿಂಸೆ ಮಾಡಿದರೆ ನಿಮ್ಮೂರಿನ ಹುಡುಗನಿಗೆ ತೊಂದರೆ ಮಾಡಿದಂತೆಯೇ ಸರಿ. ಇಷ್ಟಾಗಿಯೂ ನೀವು ಕೇಳದಿದ್ದರೆ ಬನ್ನಿ ನನಗೆ ಹೊಡೆಯಿರಿ, ನಾನು ಏಟು ತಿನ್ನಲು ಸಿದ್ಧ'' ಎಂದೆ.

ಏನು ಚಮತ್ಕಾರ ನಡೆಯಿತೋ ತಿಳಿಯದು. ಅವರೊಳಗೆ ಸಣ್ಣ ಮಾತುಕಥೆ ನಡೆಸಿದ ಬಳಿಕ, ''ಅಗಲಿ ಸರ್, ನೀವು ನಮ್ಮ ಊರಿಗೆ ಸಂಬಂಧಪಟ್ಟವರು. ಅನ್ಯಾಯ ಮಾಡಲಾರಿರಿ ಎಂಬ ಧೈರ್ಯದಿಂದ ಹಿಂದೆ ಹೋಗುತ್ತೇವೆ. ಆದರೆ ಆ ಪೋಲಿಸಪ್ಪನನ್ನು ಕಂಡು ನಾವು ಹೋಗುತ್ತಿಲ್ಲ...'' ಎಂದಾಗಲೇ ನಿಟ್ಟುಸಿರು ಬಿಟ್ಟದ್ದು.

ಕೊನೆಗೆ ಗುಂಪು ಚದುರಿ ಹೋಯಿತು, ಎಲ್ಲವೂ ತಿಳಿಯಾಯಿತು. ಎಲ್ಲರ ಮುಖದಲ್ಲೂ ಸಮಾಧಾನದ ಛಾಯೆ ಕಾಣಿಸಿತು. ಈ ವಾರ್ತೆ ಸ್ಥಳೀಯ ಡಿವೈಎಸ್‌ಪಿ ಮ್ಯಾಗೇರಿ ಸಾಹೇಬರಿಗೆ ತಲುಪಿತು. ಕೂಡಲೇ ಸಂಜೆ ವೇಳೆಗೆ ಆಫೀಸ್‌ಗೆ ಕರೆಯಿಸಿಕೊಂಡು, ಕಾಫಿ ಕುಡಿಸಿ, ಸತ್ಕರಿಸಿ ಧನ್ಯವಾದ ಹೇಳಿದರು. ಮರುದಿನದಿಂದ ನನ್ನನ್ನು ಹೊರಗೆ ಡ್ಯೂಟಿಗೆ ಹೋಗದೆ ಅವರ ಕಛೇರಿಯಲ್ಲಿಯೇ ಇದ್ದು, ಅವರೊಂದಿಗೆ ಗಸ್ತು ಹೊಡೆಯುವ ಕಾರ್ಯಕ್ಕೆ ಸೇರಿಕೊಳ್ಳಲು ಹೇಳಿದರು. ನಾನು, ''ಇದು ಸರಿ ಅಲ್ಲ ಸರ್, ನನ್ನನ್ನು ಉಳಿದವರಂತೆ ತಿಳಿಯಿರಿ. ಹೆಚ್ಚಿನ ರಿಯಾಯಿತಿ ಮಾಡದಿರಿ'' ಎಂದು ಕೇಳಿಕೊಂಡರೂ ಅವರು ಕೇಳಲಿಲ್ಲ. ಆದ್ದರಿಂದ ಮರುದಿನ ಅವರ ಆಜ್ಞೆಯಂತೆ ಅವರ ಕಚೇರಿಯಿಂದಲೇ ಕರ್ತವ್ಯ ನಿರ್ವಹಿಸುವುದು ಅನಿವಾರ್ಯವಾಯಿತು.

(ಲೇಖಕರು : ಎಡಿಎ ಮತ್ತು ಡಿಆರ್‌ಡಿಒ ಇಲಾಖೆಯ ನಿವೃತ್ತ ಸಾರ್ವಜನಿಕ ಅಧಿಕಾರಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಂಘರ್ಷ ಜಗತ್ತಿಗೆ ಮಾರಕ

ರಷ್ಯಾ– ಯುಕ್ರೇನ್, ಇಸ್ರೇಲ್–ಪ್ಯಾಲೆಸ್ಟೈನ್ ಯುದ್ಧದಿಂದ ಕಂಗೆಟ್ಟಿರುವ, ಜಗತ್ತು ಈಗ ಇರಾನ್ –ಇಸ್ರೇಲ್ ದೇಶದ ಮೇಲೆ ಡ್ರೋನ್, ಬ್ಯಾಲೆಸ್ಟಿಕ್ ಮತ್ತು ಕ್ರೂಸ್ ಮಿಸೈಲ್‌ಗಳನ್ನು ಬಳಸಿ ದಾಳಿ ಮತ್ತು ಇದಕ್ಕೆ ತಕ್ಕ ಉತ್ತರ ನೀಡಲು ಇಸ್ರೇಲ್ ಸಜ್ಜಾಗಿರುವುದು ಜಗತ್ತಿನಲ್ಲಿ ಅತಂಕವನ್ನು ಮನೆಮಾಡುವಂತೆ ಮಾಡಿದೆ.

ಇರಾನ್ ಅತ್ಯಾಧುನಿಕ ಡ್ರೋನ್ ವ್ಯವಸ್ಥೆಯನ್ನು ಹೊಂದಿದ್ದು, ಸುಧಾರಿತ ಮಾದರಿಯ ಮಿಸೈಲ್‌ಗಳನ್ನು ಹೊಂದಿದೆ. ಒಂದು ಮಾಹಿತಿಯ ಪ್ರಕಾರ ಇರಾನ್ 12ರಿಂದ 16 ದಿನದಲ್ಲಿ ಅಣ್ವಸ್ತ್ರ ತಯಾರಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಮಾತ್ರ ಅಣ್ವಸ್ತ್ರ ದೇಶವಾಗಿದ್ದು ಉಳಿದ ರಾಷ್ಟ್ರಗಳ ಮಧ್ಯೆ ಪ್ರತ್ಯೇಕವಾಗಿದೆ. ಒಂದು ವೇಳೆ ಇರಾನ್ ಅಣ್ವಸ್ತ್ರ ದೇಶವಾದರೆ ಅದು ಇಸ್ರೇಲ್‌ಗೆ ಮಾರಕವಾಗಿ ಪರಿಣಸಬಹುದಾಗಿದೆ. ಇದರೊಂದಿಗೆ ಇರಾನ್‌ಗೆ ರಷ್ಯಾ ಮತ್ತು ಚೀನಾ ರಾಷ್ಟ್ರಗಳ ಬೆಂಬಲವಿರುವುದು ಬೆಳಕಿಗೆ ಬಂದಿದೆ.

ಇರಾನ್ ಮತ್ತು ಇಸ್ರೇಲ್ ಎರಡು ದೇಶಗಳೊಂದಿಗೆ ಭಾರತದ ಬಾಂಧವ್ಯ ಸುಮಧುರವಾಗಿದೆ. ಇರಾನ್ ಭಾರತದ ಅತಿದೊಡ್ಡ ಕಚ್ಚಾ ತೈಲ ಪೂರೈಕೆ ಮಾಡುವ ದೇಶದೊಂದಿಗೆ ಭಾರತಕ್ಕೆ ತನ್ನ ದೇಶದ ಚಾಹಬರ್ ಬಂದರನ್ನು ನೀಡಿದೆ. ಇದರಿಂದಾಗಿ ಭಾರತ ಸುಲಭವಾಗಿ ಯುರೋಪಿನ ದೇಶಗಳನ್ನು ತಲುಪಬಹುದಾಗಿದ್ದು, ರಕ್ಷಣಾತ್ಮಕ ದೃಷ್ಟಿಯಿಂದಲೂ ಇರಾನ್ ಭಾರತಕ್ಕೆ ಅಯಾಕಟ್ಟಿನ ಸ್ಥಳವಾಗಿದೆ.

ಆದರೆ ಇಸ್ರೇಲ್ ಭಾರತ ಬಹುದೊಡ್ಡ ಆಯುಧ ಪೂರೈಕೆಯ ದೇಶವಾಗಿದ್ದು , ಹಲವಾರು ಸಂದರ್ಭಗಳಲ್ಲಿ ಭಾರತದ ಬೆಂಬಲಕ್ಕೆ ನಿಂತಿದೆ. 1971ರ ಬಾಂಗ್ಲಾದೇಶ ವಿಮೋಚನೆಯ ಯುದ್ಧ ಮತ್ತು ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಅಮೆರಿಕ ಭಾರತಕ್ಕೆ ಜಿಪಿಎಸ್ ಮಾಹಿತಿ ನಿರಾಕರಿಸಿದಾಗ, ಇಸ್ರೇಲ್ ನಮಗೆ ಜಿಪಿಎಸ್ ಮಾಹಿತಿ ನೀಡುವ ಮೂಲಕ ಹಾಗೂ ಆಯುಧಗಳನ್ನು ನೀಡುವ ಮೂಲಕ ಯುದ್ಧ ಗೆಲ್ಲಲು ಅನುಕೂಲ ಮಾಡಿಕೊಟ್ಟಿದೆ.

ಇರಾನ್ ಮತ್ತು ಇಸ್ರೇಲ್ ಯುದ್ಧ ಸಂಭವಿಸಿದರೆ ಕಚ್ಚಾ ತೈಲದ ಬೆಲೆ ಏರಿಕೆಯಾಗುವ ಸಂಭವ ಹೆಚ್ಚಾಗುತ್ತದೆ. ಇದರಿಂದಾಗಿ ದಿನನಿತ್ಯದ ವಸ್ತುಗಳ ಬೆಲೆ ಹೆಚ್ಚಾಗುತ್ತದೆ ಈ ದೇಶಗಳ ನಡುವಿನ ಯುದ್ಧ ನೇರವಾಗಿ ಭಾರತದ ಮೇಲೆ ಪರಿಣಾಮ ಬೀರುತ್ತದೆ. ಇಸ್ರೇಲ್‌ಗೆ ಅಮೆರಿಕ , ಬ್ರಿಟನ್ , ಫ್ರಾನ್ಸ್‌ಂತಹ ಯುರೋಪಿಯನ್ ದೇಶಗಳ ಬೆಂಬಲವಿದ್ದು, ಅದು ಕೂಡ ಪ್ರತಿಕಾರಕ್ಕೆ ಹವಣಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ವಿಶ್ವಸಂಸ್ಥೆ, ಭಾರತ ಹಾಗೂ ಇತರೆ ಶಾಂತಿಪ್ರಿಯ ದೇಶಗಳು ಒಗ್ಗಟ್ಟಾಗಿ ಇಸ್ರೇಲ್ ಮತ್ತು ಇರಾನ್ ದೇಶಗಳಿಗೆ ಎಚ್ಚರಿಕೆ ನೀಡುವ ಮೂಲಕ ಯುದ್ಧವನ್ನು ತಡೆಗಟ್ಟಿ ಜಗತ್ತಿನಲ್ಲಿ ಇನ್ನೊಂದು ಯುದ್ಧ ಸಂಭವಿಸಿದಂತೆ ಎಚ್ಚರವಹಿಸಬೇಕಾಗಿದೆ.

– **ರಾಸುಮ ಭಟ್** ಚಿಕ್ಕಮಗಳೂರು.

ದ್ವಾರಕೀಶ್ ಹೆಸರಲ್ಲಿ ಸ್ಮಾರಕ

ಕನ್ನಡ ಸಿನಿಮಾದಲ್ಲಿ 50 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಮಾಡಿದ ನಟ, ನಿರ್ಮಾಪಕ, ನಿರ್ದೇಶಕ ಕನ್ನಡದ ಕುಳ್ಳ ಎಂದೇ ಖ್ಯಾತರಾಗಿದ್ದ ದ್ವಾರಕೀಶ್ ಅವರ ಸವಿನೆನಪಿನ ಸ್ಮಾರಕವನ್ನು ರಾಜ್ಯ ಸರಕಾರ ಮಾಡಲಿ. ದ್ವಾರಕೀಶ್ ಹೆಸರನ್ನು ಬೆಂಗಳೂರಿನ ಯಾವುದಾದರೂ ಹೊಸ ಬಡಾವಣೆಗೆ, ಪ್ರಮುಖ ರಸ್ತೆಗೆ ಅಥವಾ ಉದ್ಯಾನವನಕ್ಕೆ ನಾಮಕರಣ ಮಾಡುವ ಕ್ರಮಕೈಗೊಳ್ಳಲಿ. ಕೇವಲ ದ್ವಾರಕೀಶ್ ಮಾತ್ರವಲ್ಲದೇ, 500ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದ ಅಭಿನಯ ಶಾರದೆ ಜಯಂತಿಯವರ ಹೆಸರನ್ನು ಒಂದು ಸಣ್ಣ ರಸ್ತೆಗೂ ಉದ್ಯಾನವನಕ್ಕೂ ಇಟ್ಟಿಲ್ಲವೇಕೆ?

ನಟರ ಹೆಸರಿನಲ್ಲಿ ಪ್ರತಿಮೆ, ಪ್ರಶಸ್ತಿ, ದೊಡ್ಡ ರಸ್ತೆಗಳಿಗೆ ಉದ್ಯಾನವನಗಳಿಗೆ ಅವರ ಹೆಸರನ್ನು ನಾಮಕರಣ ಮಾಡಲಾಗುತ್ತದೆ. ಕೆಲವರಿಗಷ್ಟೆ ಆ ಭಾಗ್ಯ! ಉದಯಕುಮಾರ್, ಕಲ್ಯಾಣಕುಮಾರ್ ಹೆಸರಿನ ಒಂದು ಸಣ್ಣ ರಸ್ತೆ ಸಹ ಕರ್ನಾಟಕದಲ್ಲಿಲ್ಲ. 500 ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಹಾಸ್ಯ ಬ್ರಹ್ಮ ಬಾಲಕೃಷ್ಣರವರ ಹೆಸರನ್ನು ಒಂದು ದೊಡ್ಡ ರಸ್ತೆಗೆ ಇದುವರೆಗೂ ಸರಕಾರ ನಾಮಕರಣ ಮಾಡಿಲ್ಲ. ನರಸಿಂಹರಾಜು ಹೆಸರಿನ ರಸ್ತೆ ಇದೆಯಾ! ರಾಜೇಶ್, ಎಲ್.ವಿ ಶಾರದಾ, ಬಿ ಜಯಾ, ಕಲ್ಪನಾ, ಮಂಜುಳಾ, ಅಶ್ವತ್, ರಾಜಾನಂದ್, ಹೆಸರಿನ ಒಂದು ಸಣ್ಣ ರಸ್ತೆ ರಾಜ್ಯದಲ್ಲಿಲ್ಲ. ಜನಪ್ರಿಯ ಪ್ರತಿಭಾವಂತ ನಟನಟಿಯರು ಮರಣ ಹೊಂದಿದಾಗ ಕಡೆಯ ಪಕ್ಷ ಅವರ ತವರು ಜಿಲ್ಲೆ, ತಾಲೂಕುಗಳಲ್ಲಿ ಒಂದು ರಸ್ತೆಗಾದರೂ ಹೆಸರಿಡಲು ಹಿಂದೇಟೇಕೆ? ಕೇವಲ ಸಿನಿಮಾ ಮಾತ್ರವಲ್ಲದೇ, ವೃತ್ತಿ ಹಾಗೂ ಹವ್ಯಾಸಿ ನಾಟಕರಂಗದ ನಟನಟಿಯರ ಹೆಸರಿನ ನಾಮಕರಣಕ್ಕೆ ಹಿಂಜರಿಕೆ ಏಕೆ?

ರೌಡಿಗಳ, ಕೊಲೆಗಾರರ, ಭ್ರಷ್ಟಾಚಾರಿಗಳ ಕಳ್ಳ ಖದೀಮರ ಹೆಸರಿನ ಬಡಾವಣೆಗಳು ರಸ್ತೆಗಳ ಸಂಖ್ಯೆ ಬೆಂಗಳೂರಿನಲ್ಲಿ ಬೇಕಾದಷ್ಟಿವೆ! ಆದರೆ ಕನ್ನಡ ಸಿನಿಮಾ ಹಾಗೂ ನಾಟಕ ರಂಗದ ನಟನಟಿಯರ ಹೆಸರಿನ ರಸ್ತೆಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ರಾಜ್ಯ ಸರಕಾರ ಹಾಗೂ ಬಿಬಿಎಂಪಿ ಇನ್ನಾದರೂ ಕನ್ನಡ ಸಿನಿಮಾ ಹಾಗೂ ನಾಟಕ ರಂಗದ, ನಟನಟಿಯರ, ಕನ್ನಡ ಸಾಹಿತಿಗಳ ಹೆಸರನ್ನು ರಸ್ತೆ, ಉದ್ಯಾನವನಗಳಿಗೆ ಇಡುವ ಕಲಾವಂತಿಕೆ, ಹೃದಯವಂತಿಕೆಯ ಕಲಾಪ್ರೇಮ ಪ್ರದರ್ಶಿಸಬಾರದೇ.

– **ಮಂಜುಳಾ ರಾಮಶೇಷ** ಶ್ರೀನಗರ, ಬೆಂಗಳೂರು

ದ್ವೇಷ ಭಾಷಣ ಬೇಡ

ಲೋಕಸಭೆ ಚುನಾವಣೆ ಸಾಗಿದಂತೆ ರಾಜಕೀಯ ಪಕ್ಷಗಳ ನಡುವೆ ವಾಕ್ಸಮರ ಜೋರಾಗುವುದು ಸಹಜ. ಆದರೆ ಈ ಬಾರಿಯ ಚುನಾವಣೆಯಲ್ಲಿ ಮಿತಿ ಮೀರಿ ಅಸಭ್ಯ ಭಾಷೆಯಲ್ಲಿ ಬೈದಾಡಿಕೊಳ್ಳುತ್ತಿರುವುದು, ಎದುರಿನವರ ಮೇಲೆ ದ್ವೇಷ ಪ್ರಚೋದಿಸುವಂತಿರುವುದು ವಿಷಾದನೀಯ. ವಾಗ್ದಾಳಿಗಳು ಸಭ್ಯತೆಯ ಎಲ್ಲೆ ಮೀರದಂತಿರಬೇಕು, ಆರೋಗ್ಯಕರವಾಗಿರಬೇಕು. ಅವಹೇಳನ, ದ್ವೇಷ, ರೋಷಾವೇಶವಿಲ್ಲದೆಯೂ ರಾಜಕೀಯ ಪಕ್ಷಗಳು ಪರಸ್ಪರ ಪರಿಣಾಮಕಾರಿಯಾಗಿ ಆರೋಪ ಪ್ರತ್ಯಾರೋಪ ಮಾಡಲು ಸಾಧ್ಯವಿದೆ. ಎದುರಾಳಿಯನ್ನು ಎದುರಿಸಲು ಇಂಥ ಘನತೆಯಿರಬೇಕು. ಚುನಾವಣೆಯ ಸಂದರ್ಭದಲ್ಲಿ ಸರಕಾರದ ಪ್ರಗತಿ, ಭ್ರಷ್ಟಾಚಾರ, ಸಾಧನೆ, ವೈಫಲ್ಯಗಳ ಬಗ್ಗೆ ಅರ್ಥಪೂರ್ಣ ಚರ್ಚೆಯಾಗಬೇಕು. ಆಡಳಿತ ಪಕ್ಷ ಸರಿಯಾಗಿ ತನ್ನ ಪಾತ್ರ ನಿರ್ವಹಿಸಿದೆಯೋ ಇಲವೋ ಎಂದು ವಿಮರ್ಶಿಸಬೇಕು. ಚುನಾವಣೆಯಲ್ಲಿ ಜಾತಿ, ಧರ್ಮವನ್ನು ತಕ್ಕ ಹಾಗೆ ವಿಶ್ಲೇಷಿಸುವುದು, ಕೀಳುಮಟ್ಟದ ವೈಯಕ್ತಿಕ ಕೆಸರೆರೆಚಾಟ, ಚಾರಿತ್ರ್ಯ ವಧೆಯಂತಹ ನಡಾವಳಿಗಳನ್ನು ಯಾವುದೇ ಪ್ರಜ್ಞಾವಂತ ಸಮಾಜ ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ. ಉನ್ನತ ಸ್ಥಾನದಲ್ಲಿರುವವರು ಎದುರಾಳಿಗಳ ಬಗ್ಗೆ ಮಾನಹಾನಿಕರವಾದ ಮಾತುಗಳನ್ನಾಡಬಾರದು. ಪಕ್ಷ ಯಾವುದೇ ಆಗಲಿ ರಾಜಕಾರಣಿಗಳು ಸಭ್ಯತೆಯ ಎಲ್ಲೆ ಮೀರಬಾರದು. ಸಮಾಜಕ್ಕೆ ಒಳ್ಳೆಯ ಮಾದರಿಯನ್ನು ಸೃಷ್ಟಿಸಬೇಕು ಹೊರತು ಕೆಟ್ಟದ್ದನ್ನಲ್ಲ.

– **ಉದಯ ಮ. ಯಂಡಿಗೇರಿ** ಧಾರವಾಡ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು